೯೦

12

17/03

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಂ.ಜಿ.ಮುಳೆ ಇವರ ನಿಯಮ 330ರಡಿಯ ಸೂಚನೆಗೆ ಉತ್ತರ**

**ವಿಷಯ:** ಬೀದರ್ ಜಿಲ್ಲೆಯ ಕಾರಂಜಾ ಜಲಾಶಯ ಯೋಜನೆಯ ಸಂತ್ರಸ್ತರಿಗೆ ಕಳೆದ ನಾಲ್ಕು ದಶಕಗಳಿಂದ ಬಾಕಿ ಇರುವ ವೈಜ್ಞಾನಿಕ ಪರಿಹಾರ ಮತ್ತು ವಿಶೇಷ ಪ್ಯಾಕೇಜ್ ಘೋಷಿಸುವ ಕುರಿತು ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಜಲ ಸಂಪನ್ಮೂಲ ಸಚಿವರಲ್ಲಿ ಪ್ರಸ್ತಾಪಿಸುತ್ತೇನೆ.

*****

ಬೀದರ್ ಜಿಲ್ಲೆಯಲ್ಲಿ ಕಾರಂಜಾ ನೀರಾವರಿ ಯೋಜನೆಯು ಒಂದು ಬೃಹತ್ ನೀರಾವರಿ ಯೋಜನೆಯಾಗಿದ್ದು, ಸದರಿ ಯೋಜನೆಯನ್ನು 1969-70 ನೇ ಸಾಲಿನಲ್ಲಿ ಪ್ರಾರಂಭಿಸಿ 1989ರಲ್ಲಿ ಲೋಕಾರ್ಪಣೆ ಮಾಡಲಾಗಿರುತ್ತದೆ. ಸದರಿ ಯೋಜನೆಗೆ ಹಂಚಿಕೆಯಾದ 9.27 ಟಿ.ಎಂ.ಸಿ. ನೀರನ್ನು ಉಪಯೋಗಿಸಿ, ಬೀದರ ಜಿಲ್ಲೆಯ ಭಾಲ್ಕಿ, ಬೀದರ ಹಾಗೂ ಹುಮನಾಬಾದ ತಾಲ್ಲೂಕಿನ ಒಟ್ಟು 29,227 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಯೋಜಿಸಲಾಗಿದೆ.

ಕಾರಂಜಾ ಯೋಜನೆ ಅಡಿಯಲ್ಲಿ ಒಟ್ಟು 21,217 ಎಕರೆ 35 ಗುಂಟೆ ಭೂಸ್ವಾಧೀನವಾಗಿದ್ದು, ಬಾಕಿ 439 ಎಕರೆ 13 ಗುಂಟೆ ಜಮೀನು ಸ್ವಾಧೀನ ವಿವಿಧ ಹಂತಗಳಲ್ಲಿರುತ್ತದೆ.

ಈ ಯೋಜನೆಯಡಿಯಲ್ಲಿ ಭೂಸ್ವಾಧೀನಗೊಂಡ ಎಲ್ಲಾ ಜಮೀನಿಗೆ ಭೂಸ್ವಾಧೀನ ಕಾಯ್ದೆ ಪ್ರಕಾರ ಅವಾರ್ಡ್ ಅನ್ನು ಮಂಜೂರು ಮಾಡಿ, ಪರಿಹಾರಧನವನ್ನು ವಿತರಿಸಲಾಗಿದೆ ಮತ್ತು ಕೆಲವು ಭೂಮಾಲೀಕರು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಹೆಚ್ಚುವರಿ ಪರಿಹಾರ ಧನಕ್ಕಾಗಿ ಭೂಸ್ವಾಧೀನ ಕಾಯ್ದೆ 1864 ರ ಕಲಂ 18(1) ರ ನಿಗದಿತ 6 ತಿಂಗಳ ಅವಧಿಯಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಅರ್ಜಿಗಳನ್ನು ಪುರಸ್ಕರಿಸಿ, ಮಾನ್ಯ ನ್ಯಾಯಾಲಯವು ನೀಡಿರುವ ಆದೇಶದನ್ವಯ ಹೆಚ್ಚುವರಿ ಪರಿಹಾರವನ್ನು ವಿತರಿಸಲಾಗಿದೆ.

ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲಾಗದ ಭೂಮಾಲೀಕರು 3 ತಿಂಗಳ ಅವಧಿಯಲ್ಲಿ SLAO ರವರಿಗೆ ಭೂಸ್ವಾಧೀನ ಕಾಯ್ದೆ 1864 ಕಲಂ 28 (ಎ) ರಡಿಯಲ್ಲಿ ಈ ಮೇಲೆ ನ್ಯಾಯಾಲಯ ನೀಡಿರುವ ಹೆಚ್ಚುವರಿ ಪರಿಹಾರಕ್ಕಾಗಿ ಅರ್ಜಿಯನ್ನು ಸಲ್ಲಿಸಬೇಕಾಗಿರುತ್ತದೆ. ಆದರೆ, 18 (1)ರ ರಡಿಯಲ್ಲಿ ನ್ಯಾಯಾಲಯಕ್ಕೆ ಮತ್ತು ಕಲಂ 28 (ಎ)ರಡಿ SLAO ರವರಿಗೆ ನಿಗದಿತ ಅವಧಿಯೊಳಗೆ ಅರ್ಜಿಯನ್ನು ಸಲ್ಲಿಸದ ಭೂಮಾಲೀಕರಿಗೆ ಹೆಚ್ಚುವರಿ ಪರಿಹಾರವನ್ನು ಭೂಸ್ವಾಧೀನ ಕಾಯ್ದೆ 1864 ಕಲಂ 18 (1) ಹಾಗೂ 28 (ಎ) ರಡಿ ಅವಕಾಶವಿರದ ಕಾರಣ ಹೆಚ್ಚುವರಿ ಪರಿಹಾರ ನೀಡಲಾಗಿರುವುದಿಲ್ಲ.

ಹೆಚ್ಚುವರಿ ಪರಿಹಾರ ಧನಕ್ಕಾಗಿ ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಭೂಸ್ವಾಧೀನ ಕಾಯ್ದೆ 1864 ಕಲಂ 18 (1) ಹಾಗೂ 28 (ಎ) ಅರ್ಜಿಗಳನ್ನು ಸಲ್ಲಿಸದಿರುವ ಭೂಮಾಲೀಕರಿಗೂ ಕೂಡ ಪರಿಹಾರ ಧನ ಮತ್ತು ಆಲಮಟ್ಟಿ ಮಾದರಿಯಲ್ಲಿ ಪರಿಹಾರ ನೀಡುವಂತೆ ಕೋರಿ ಕಾರಂಜಾ ಯೋಜನೆಯ ಮುಳುಗಡೆ ಸಂತ್ರಸ್ಥರ ಹೋರಾಟ ಸಮಿತಿ, ಬೀದರ್ ಇವರು ಹೋರಾಟ ಮಾಡುತ್ತಿದ್ದಾರೆ. ಸದರಿ ವಿಷಯವಾಗಿ ಪರಿಶೀಲಿಸಲು ದಿನಾಂಕ:15.09.2005ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಉನ್ನತ ಮಟ್ಟದ ಅಧಿಕಾರಿಗಳ ಮತ್ತು ಅಧಿಕಾರೇತರರ ಸಮಿತಿಯು ರೂ.54.00 ಕೋಟಿಗಳ ಅಂದಾಜಿನ ವಿಶೇಷ ಪುನರ್‌ವಸತಿ ಪ್ರಸ್ತಾವನೆಯನ್ನೊಳಗೊಂಡಂತೆ ನೀಡಿರುವ ವರದಿಯನ್ನು ದಿನಾಂಕ:25.06.2014ರಂದು ಸಚಿವ ಸಂಪುಟವು ......the claims of all the affected persons have been settled originally according to the Law, and that it is a settled matter ಎಂದು ಪರಿಗಣಿಸಿ, ತಿರಸ್ಕರಿಸಿರುತ್ತದೆ.

ಮುಂದುವರೆದು, ಮಾನ್ಯ ಮುಖ್ಯಮಂತ್ರಿಯವರು ದಿನಾಂಕ:19.12.2024ರಂದು ಬೆಳಗಾವಿಯ ಸುವರ್ಣ ಸೌಧದಲ್ಲಿ ಕಾರಂಜಾ ಜಲಾಶಯ ಯೋಜನೆಯ ಮುಳುಗಡೆ ಪ್ರದೇಶದ ಸಂತ್ರಸ್ಥರ ಸಮಸ್ಯೆಗಳ ಬಗ್ಗೆ ಚರ್ಚಿಸಲು ನಡೆದ ಸಭೆಯಲ್ಲಿ ಸೂಚಿಸಿರುವಂತೆ ಕಾರಂಜಾ ಮುಳುಗಡೆ ಸಂತ್ರಸ್ಥರ ಬೇಡಿಕೆಗಳನ್ನು ಪರಿಶೀಲಿಸುವ ಸಂಬಂಧದಲ್ಲಿ ದಿನಾಂಕ:07.04.2025ರಂದು ಪ್ರಾದೇಶಿಕ ಆಯುಕ್ತರು, ಕಲಬುರಗಿ ರವರ ಅಧ್ಯಕ್ಷತೆಯಲ್ಲಿ ಅಧಿಕಾರಿಗಳ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ದಿನಾಂಕ:13.11.2025ರಂದು ವರದಿ ನೀಡಿದ್ದು, ವರದಿಯು ಸರ್ಕಾರದಲ್ಲಿ ಪರಿಶೀಲನೆಯಲ್ಲಿದೆ.

(ಡಿ.ಕೆ.ಶಿವಕುಮಾರ್)
ಉಪ ಮುಖ್ಯಮಂತ್ರಿ

ಜಸಂಇ 70 ಎಂಎಲ್ಎ 2026